ಎಲ್ಲ ಮಂಗಗಳು ಪ್ರಯತ್ನ ಮಾಡಿದರೂ ಅದರ ಬಾಲ ಹೊರತರುವ ಯತ್ನ ಸಫಲವಾಗಲಿಲ್ಲ. ಬಾಲ ಕಡಿಯುವುದೊಂದೇ ದಾರಿ ಎಂದು ಅವು ಯೋಚಿಸಿದವು. ಆದರೆ ಅದಕ್ಕೆ ಬಾಲ ಸಿಕ್ಕಿಸಿಕೊಂಡಿದ್ದ ಮಂಗ ಅದಕ್ಕೆ ತಯಾರಿರಲಿಲ್ಲ. ಯಾವ ಮಂಗಗಳಿಗೂ ಏನು ಮಾಡಬೇಕೆಂಬ ಉಪಾಯ ತೋಚದೆ ಚಿಂತಾಕ್ರಾಂತವಾದವು. ಹಿರಿಯ ಮಂಗ ಅದರ ಸಂಕಟ ನೋಡಲಾರದೆ ಅದರ ಯಾತನೆಗೆ ಪರಿಹಾರಕ್ಕಾಗಿ, ಊರ ಮಂಗನನ್ನು ಕರೆದುಕೊಂಡು ಬರೋಣ ಎಂಬುದಾಗಿ ಉಳಿದ ಮಂಗಗಳಿಗೆ ಸಲಹೆ ಮಾಡಿತು. ಉಳಿದವು ಸಹ ಆ ಮಂಗನ ಸಲಹೆಯನ್ನ ಒಪ್ಪಿದವು. ಅದರ ಸಂಕಟವನ್ನು ಊರ ಮಂಗನ ಬಳಿ ವಿವರಿಸಿ ಹೇಳಿ, ಅದನ್ನು ಪಾರುಮಾಡುವ ಉಪಾಯ ತಿಳಿಸಬೇಕೆಂದು ಕಣ್ಣೀರು ಹಾಕಿದವು.

ಅವುಗಳ ದುಃಖ ನೋಡಲಾರದೆ, ಊರಮಂಗ ಎಲ್ಲವನ್ನೂ ಅರಿತುಕೊಂಡಿತು. ಅದು ಬಡಗಿಯ ದಿನನಿತ್ಯದ ಕೆಲಸ ನೋಡುತ್ತಾ ಇದರಿಂದ, ಅದಕ್ಕೆ ಥಟ್ಟನೆ ಒಂದು ಉಪಾಯ ಹೊಳೆಯಿತು. ಆಗ ಊರ ಮಂಗ, ಮಂಗ ಬಾಲ ಸಿಕ್ಕಿಸಿಕೊಂಡಿದ್ದ ದಿಮ್ಮಿ ಬಳಿ ಸಾಗಿ, ಕಿತ್ತ ಬೆಣೆಯನ್ನು ಹುಡುಕಿ ಬಾಲದ ಪಕ್ಕದಲ್ಲಿ ಸಿಗಿಸಿ ನಿಧಾನವಾಗಿ ಮೇಲಿಂದ ಬಡಿಯುತ್ತ ಬೆಣೆ ದಿಮ್ಮಿಮಧ್ಯೆ ಇಳಿಯುವಂತೆ ಮಾಡಿತು. ಬೆಣೆ ಇಳಿದಂತೆ ದಿಮ್ಮಿಮಧ್ಯೆ ಭಾಗ ಅಗಲವಾಗಿ ಮಂಗನಬಾಲ ಹೊರತೆಗೆಯಲು ಸಹಾಯವಾಯಿತು. ಆಗ ಕಾಡಿನ ಮಂಗಗಳು ಊರಿನ ಮಂಗನ ಜಾಣ ತನವನ್ನು ಹೊಗಳಿದವು. ಅದಕ್ಕೆ ಊರ ಮಂಗ, 'ನೋಡಿ, ನಾವು ಏನೇ ಮಾಡಿದರು, ಅದರಿಂದ ಏನಾಗಬಹುದು ಎಂದು ಯೋಚಿಸಿ ಕೆಲಸ ಮಾಡಬೇಕು. ಅದರಿಂದ ನಮಗೆ ಲಾಭಗಳು ಆಗದಿದ್ದರೂ, ಹಾನಿಯಂತೂ ಖಂಡಿತ ಆಗುವುದಿಲ್ಲ. ಇದನ್ನು ಅರಿತು ಬಾಳಿರಿ. ಹಿರಿಯರ ಮಾತು ಆಲಿಸಿರಿ' ಎಂದು ಬುದ್ಧಿ ಮಾತು ಹೇಳಿ ತನ್ನ ಕೆಲಸಕ್ಕೆ ಹೋಯಿತು.

■





## ಕುಂಚ ಪ್ರಪಂಚ



**ಅನಘ ಭಟ್**
4ನೇ ತರಗತಿ
ಶ್ರೀ ಶಾರದಾ
ಪಬ್ಲಿಕ್ ಶಾಲೆ,
ಮೈಸೂರು.



### ನೀವೂ ಚಿತ್ರ ಬರೆಯಿರಿ

'ಸುಧಾ' ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ– ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ– ರೇಖಾ ಚಿತ್ರಗಳನ್ನು ಕಳುಹಿಸಬಹುದು.
ಇ ಮೇಲ್: editorsu@sudha.co.in

# ಅನ್ನದಾತನಾಗಿ ಬಾಳುವೆ

ಎಷ್ಟು ಚಂದ ಎಷ್ಟು ಅಂದ
ಅಜ್ಜ–ಅಜ್ಜಿ ನಿಮ್ಮ ಊರು

ದೂಳು ಇಲ್ಲ ಹೊಗೆಯು ಇಲ್ಲ
ದಿನಕ್ಕೊಂದು ದಂಗೆ ಇಲ್ಲ ದೊಂಬಿ ಇಲ್ಲ
ಮಳೆ ಆದರೂ ಗುಂಡಿಗಳಿಲ್ಲ
ತೇಲಿ ಹೋಗುವ ಭಯವೇ ಇಲ್ಲ

ತುಂಬ ಜನ ತುಂಬ ಭಯ
ನಮ್ಮ ಊರು ಬೆಂಗಳೂರು
ಕಾರು, ಬಸ್ಸು, ಸ್ಕೂಟರ್ ಲಾರಿ
ಕೀಕೀ, ಪೀಪೀ ಗಾಡಿಗಳ ಸಾಲು ಸಾಲು

ಎಷ್ಟು ಚಂದ ಎಷ್ಟು ಅಂದ
ಅಜ್ಜ ಅಜ್ಜಿ ನಿಮ್ಮ ಊರು

ಕಾಡು ಮೇಡು ಬೆಟ್ಟ ಗುಡ್ಡ
ಹಸಿರು ಹೊದ್ದ ಗದ್ದೆ ಸಾಲು
ಗೋವು ಗಂಟೆ, ಎತ್ತು ಬಂಡೆ
ಸಂಜೆ ಭಜನೆ ಗುಡಿಗಳಲ್ಲಿ

ಶಾಲೆ ಓದಿ ದೊಡ್ಡವನಾಗಿ
ಹಳ್ಳಿಗೆ ಬರುವೆ ನಾ ಮರಳಿ
ಹೊಲದಲಿ ದುಡಿದು ಬೆಳೆಯನು ಬೆಳೆದು
ಅನ್ನದಾತನಾಗಿ ಬಾಳುವೆ ನಾ ಎಂದೆಂದೂ

■ ಗೌರಿ.ಚಂದ್ರಕೇಸರಿ, ಶಿವಮೊಗ್ಗ